ತಾರೀಖು 19ನೆ ಆಗಸ್ಟ್ 1904.

ನಂ. ರೆ. 1537-413-2--1903-04. ಸ್ ಸ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ, ಇದರಡೀ ಕಂಡ ಜಮೀನುಗಳು ಕೋಲಾರ ಡಿಸ್ಟ್ರಿಕ್ಟಿನ ಕೋಲಾರ ತಾಲ್ಲೂಕಿನಲ್ಲಿ ಹೊಸತಮಕ ಗ್ರಾಮವನ್ನುಂಟುಮಾಡಲಿಕ್ಕೆ ಬೇಕಾಗಿರುತ್ತವೆ. ಮತ್ತು ಸದರೀ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಡೆಪ್ಯುಟಿ ಕಮೀಷನರವರು ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡಿಸಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರರ ಯಾ ಖಾತೇದಾರರ ಹೆಸರು.	ಜಮೀನಿನ ತಪಶೀಲು. ಸರ್ವೆ ನಂ.	ಜಮೀನಿನ ತಪಶೀಲು. ಡಿಸ್ಟ್ರಿಕ್ಟ್ ಸರ್ವೆ ನಂ.	ಜಮೀನಿನ ತಪಶೀಲು. ಆಕಾರ. ಎ.	ಗು.	ರೂ ಆ.	ಪೈ.	ಬೇಕಾಗಿರುವ ಜಮೀನಿನ ವಿಸ್ತೀರ್ಣ. ಸರ್ವೆ ನಂ.	ಎ.	ಗು.	ಹಕ್ಕ್ತುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
												ಸರ್ವೆ ನಂ.	ಸರ್ವೆ ನಂ.	ಸರ್ವೆ ನಂ.	ಸರ್ವೆ ನಂ.
ಕೋಲಾರ	ಕೋಲಾರ	ತಿನಾಳು	ತಿಮ್ಮಯ್ಯ ಬಿ॥ ಜಂಗಪ್ಪ, ಲಡ್ಡೀಕರ್ಯಾ.	ಖುಷ್ಕಿ 126	4	5	8	0	0	126	2	6	128	125	126	127
			ನರಸ ಬಿ॥ ಗಂಗ, ಚಂಬೂರ್.	ಖುಷ್ಕಿ 128 1	2	24				128	234		129	126	128	127
			ವೆಂಕಟರವಣ ಬಿ॥ ವೆಂಕಟಗ.	ಖುಷ್ಕಿ 128 2	2	28				ಜುಮ್ಲಾ...	5	0				

ತಾರೀಖು 5ನೆ ಸೆಪ್ಟಂಬರ್ 1904.

ನಂ. ರೆ. 2046—ಲ್ಯಾ. ರೆ. 138—04-2, ಪ್ರೊಬೇಷನರಿ ಅಸಿಸ್ಟೆಂಟ್ ಕಮೀಷನರಾದ ವೆ॥ ನರಸಿಂಗರಾವ್ ಪುರ್ಣಯ್ಯನವರಿಗೆ 1901ನೆ ಏಪ್ರಿಲ್ 5ನೆ ಮುಕ್ತುಂ ರೆ. 3030—ರೆ. ಫೈ. 5-1903ನೆ ನಂಬರೊಡನೆ ಆಜ್ಞೆಯಾಗುವ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 7 ತಿಂಗಳು 11 ದಿನಗಳ ರಜಾದೊಂದಿಗೆ ಇನ್ನೂ 6 ತಿಂಗಳು ತಲಬಿಲ್ಲದ ಎಕ್ಸ್ಪ್ಟಾರ್ಡಿನರಿ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 5ನೆ ಸೆಪ್ಟಂಬರ್ 1904.

ನಂ. ರೆ. 2061—ಲ್ಯಾ. ರೆ. 70-04-1, ಚಿತ್ರದುರ್ಗದ ತಾಲ್ಲೂಕಿನ ಅಮಲ್ದಾರ್ಯಾದ ವೆ॥ ವಿ. ಪಾರ್ಥಸಾರಥಿ ಅಯ್ಯಂಗಾರ್ರಿಗೆ 1904ನೆ ಆಗಸ್ಟು 9ನೆ ಮುಕ್ತುಂ ರೆ. 1160—70—2ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ರಜಾವನ್ನು ಅವರು 1904ನೆ ಜುಲೈ 15ನೆ ತಾರೀಖಿನ ಪೂರ್ವಾಹ್ನದಲ್ಲಿ ಉಪಯೋಗಿಸಿಕೊಂಡು 1904ನೆ ಜುಲೈ 30ನೆ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾಭೋಗವಂದರೆ 19 ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 6ನೆ ಸೆಪ್ಟಂಬರ್ 1904.

ನಂ. ರೆ 2125—ಫೈ. 53-04-4, ಮೈಸೂರು ಸ್ವಾಸಿ ರೆಗುಲೇಷನ್ಸುಗಳ 188ನೆ ಆರ್ಟಿಕಲ್ ಅನುಸರಿಸಿ ಮೈಸೂರ ಸೀನಿಯರ್ ಪೋಸ್ಟ್ ಸೆಪ್ರಮೆಂಟ್ ಆಫೀಸರಾದ ವೆ॥ ಎ. ಆನಂದರಾವುರಿಗೆ 1904ನೆ ಸೆಪ್ಟಂಬರ್ ಗುರ್ತು ಲಾಗಾಯ್ತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 10 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬವೋಜೀಬ್,
ಬಿ. ಕೆ. ವೆಂಕಟವರದಯ್ಯಂಗಾರ್,
ಜನರಲ್ ಪ ರವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಸೆಕ್ರಟೆರಿ.

ಜಿಯೋಲಾಜಿಕಲ್.

ಇಸ್ತಿಹಾರ್ನಾಮೆ

ಅಕುದ್ಧ.

ತಾರೀಖು 31ನೆ ಆಗಸ್ಟ್ 1904.

ನಂ. 181—ಎಸ್., ಮೈಸೂರ ಜಿಯೋಲಾಜಿಕಲ್ ಇಲಾಖೆಯ ಅಸಿಸ್ಟೆಂಟ್ ಭೂರಚನಾ ಶಾಸ್ತ್ರಜ್ಞರಾದ ವೆ॥ ಬಿ. ಜಯರಾಂ ಐಯರಿಗೆ 1904ನೆ ಮಾರ್ಚ್ 30ನೆ ಮುಕ್ತುಂ 580—ಎಸ್. ನೆ ನಂಬರಿ (ಜಿಯೋಲಾಜಿಕಲ್) ಗವರ್ನ್ಮೆಂಟಿನ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿರ್ದ ಪ್ರಿವಿಲೇಜ್ ರಜಾ ಸದರಿ ಇಸ್ತಿಹಾರ್ನಾಮೆಯಲ್ಲಿ ಕಂಡ 1904ನೆ ಮೇ ಗುರ್ತು ತಾರೀಖಿನಾರಭ್ಯ ಎಂಬದಕ್ಕೆ ಬದಲಾಗಿ 1904ನೆ ಜೂನ್ ಗುರ್ತು ತಾರೀಖಿನಾರಭ್ಯ ಜಾರೀಲಿ ಬರುತ್ತೆ.

ಹುಕುಂ ಬವೋಜೀಬ್,
ಡಬ್ಲ್ಯೂ. ಎಫ್. ಸ್ಮೀತ್,
ಜಿಯೋಲಾಜಿಕಲ್ ಇಲಾಖೆಯ ಗವರ್ನ್ಮೆಂಟ್ ಸೆಕ್ರಿಟೆರಿ.